ಮೈಸೂರ ಗೆಜೆಟ್

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 10, ಸ್ಯ 1887.

ಈ ಭಾಗವನ್ನು ಪ್ರತ್ಯೇಕ ಕೀರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ಮೆಂಟ್, ರಿಸಿಡೆಂಟರು, ಜೀಫ್ ಜಡ್ಜ್ಗಿರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಪ್ರಕಟನೆ.

ತಾರೀಖು 22ನೇ ನವಂಬರ್ 1887ನೇ ಇಸವಿ.

ಶ್ರೀಮ್ಮ ಮಹಾರಾಜರವರ ಸರ್ಕಾರದ ಅನುಮತಿಯ ಪ್ರಕಾರ 1888ನೇ ಇಸವಿಗೆ ಈ ಕೆಳಗೆ ನಮೂದಾಗುವ ಕೋರ್ಟು ರಜಾ ದಿವಸಗಳ ಪಟ್ಟಿಯು ತಿಳುವಳಿಕೆ ಬಗ್ಯೆ ಈ ಮೂಲಕ ಪ್ರಸಿದ್ಧಪಡಿಸಿದೆ.

ಅದೇ ಪ್ರಕಾರ ಈ ದಿವಸಗಳು ಈ ಸೀಮೆಯಲ್ಲಿ ಎಲ್ಲಾ ಸೀವಿಲ್ ಕೋರ್ಟುಗಳಲ್ಲಿಯೂ ಸಂಪೂರ್ಣವಾದ ರಜಾದಿವಸಗಳಾಗಿ ಆಚರಿಸಕಕ್ಕದ್ದು.

ರಜಾದಿವಸಗಳ ಪಟ್ಟಿ.

ಜನವರೀ 1ರಿಂದ 5ರ ವರಿಗೆ ಉಭಯ ದಿವಸಗಳೂ ಸೇರಿ ..	ಕ್ರಿಸ್ಮಸ್ ರಜಾ
ಸದರೀ 13, 14 ಸಹ	ಪೊಂಗಲು
ಫೆಬ್ರವರೀ 10	ಶಿವರಾತ್ರಿ
ಸದರೀ 15	ಆಷ್ವೆಡ್ನೆಸ್ಡೆ
ಸದರೀ 17	ಶ್ರೀಮ್ಮ ಮಹಾರಾಜರವರ ಜನ್ಮದಿವಸ
ಸದರೀ 27	ಹೋಳೀ ಹಬ್ಬ
ಮಾರ್ಚ್ 29ರಿಂದ ಏಪ್ರಿಲ್ 3ರವರಿಗೆ ಉಭಯ ದಿವಸಗಳೂ ಸೇರಿ ..	ಈಸ್ಟರ್ ರಜಾ
ಏಪ್ರೆಲ್ 4ರಿಂದ ಮೇ 15ರ ವರಿಗೆ ಉಭಯ ದಿವಸಗಳೂ ಸೇರಿ ..	ಪ್ರತಿ ವರುಷವೂ ಬರುವ 6 ವಾರದ ವಿರಾಮ
ಮೇ 24	ಚಕ್ರವರ್ತಿನಿಯವರ ಜನ್ಮದಿವಸ
ಜೂನ್ 20	ಶ್ರೀಮ್ಮ ಯುವರಾಜರ ಜನ್ಮ ದಿವಸ
ಆಗಸ್ಟ್ 20, 21 ಸಹ	ಆವ್ವಲಾಯನಾಪಸ್ತಂಭರ ಉಪಾಕರ್ಮ
ಸೆಪ್ಟಂಬರ್ 8	ಗೌರೀಹಬ್ಬ

ಸೆಪ್ಟಂಬರ್ 19	..	..	ಅನಂತಚತುರ್ದಶಿ
ಅಕ್ಟೋಬರ್ 5	..	..	ಮಹಾಲಯ ಅಮಾವಾಸ್ಯೆ
ಸದರೀ 6	..	..	ನವರಾತ್ರೀ ಆರಂಭ ದಿವಸ
ಸದರೀ 11ರಿಂದ 20ರ ವರಿಗೆ ಉಭಯ ದಿವಸಗಳೂ ಸೇರಿ		..	ದಸರಾ ರಜಾ
ನವಂಬರ್ 3	..	..	ದೀಪಾವಳಿ
ಸದರೀ 9	..	..	ಪ್ರಿನ್ಸ್‌ಆಫ್‌ವೇಲ್ಸ್‌ರವರೆ ಜನ್ಮದಿವಸ
ಡಿಸಂಬರ್ 24ರಿಂದ 31ರ ವರಿಗೆ ಉಭಯ ದಿವಸಗಳೂ ಸೇರಿ			ಕ್ರಿಸ್‌ಮಸ್ ರಜಾ

ಈ ವರ್ಷದಲ್ಲಿ ಬರುವ ಸಮಸ್ತ ಭಾನುವಾರಗಳೂ—

ವಿಶೇಷ ವಿಷಯ—ಶ್ರೀಮ್ಮ ಮಹಾರಾಜರವರ ರಾಜ್ಯಾಭಿಷೇಕದ ದಿವಸ, ವಿನಾಯಕ ಚತುರ್ಥೀ ಮತ್ತು ಬಲಿಪಾಡ್ಯಮಿ ಹಬ್ಬಗಳು ಇವು ಭಾನುವಾರದ ದಿವಸ ಬರುವ ಕಾರಣ, ಇಲ್ಲಿ ಸೇರಿಸಿಲ್ಲ.

ಯುಗಾದೀ ಹಬ್ಬ, ಶ್ರೀರಾಮ ನವಮಿ, ಅರ್ಧಾಷ್ಟಮಿ, ಇವುಗಳು ಪ್ರತಿ ವರ್ಷವೂ ಬರುವ ನಿರಾಮದ ರಜಾದಲ್ಲಿ ಸಂಭವಿಸುವ ಕಾರಣ ಇಲ್ಲಿ ಸೇರಿಸಿಲ್ಲ.

ಅಪ್ಪಣೇ ಪ್ರಕಾರ,

ಎಲ್. ಅನಂತಸ್ವಾಮಿರಾವ್,
ರಿಜಿಸ್ಟ್ರಾರ್.

ಇನಾಂ ಇಲಾಖೆ.

ನಂ. 1. ತಾರೀಖು 19ನೇ ನವಂಬರು 1887.

ಇನಾಂದಾರರಿಗೆ ಯಿದರಿಂದ ತಿಳಿಸುವದೇನಂದರೆ, ಲೇಟು ದೊಡ್ಡೇರಿ (ಹಾಲಿಜಳ್ಳಕೆರೆ) ತಾಲ್ಲೂಕಿನಲ್ಲಿ ಯಿರತಕ್ಕ ಜಿಲ್ಲರೆ ಇನಾಂಗಳ ಬಾಬತು 136 ಫೈನಲ್‌ಟೈಟಲ್‌ಡೀಡ್ಡು ಯಾನೆ ಖಾಯಂ ಪಟ್ಟೇಗಳು ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಗೆ ಬಟವಾಡೇ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಅವುಗಳನ್ನು ತೆಗದುಕೊಳ್ಳುವ ಬಗ್ಗೆ ಸದರೀ ಇನಾಂದಾರರು ಐಜ್ಞ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರ್ರು, ಅಂಥಾ ನೋಟೀಸ್‌ಗಳನ್ನು ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಮೇಲ್ಕಂಡ ಜಿಲ್ಲರೇ ಯಿನಾಂಗಳ ಬಗ್ಗೆ ಸ್ ೯ 1881ನೇ ಇಸವಿ ಡಿಸಂಬರ್ 6ನೇ ತಾರೀಖಿನ 21ನೇ ನಂಬರು ಇಸ್ತಿಹಾರುನಾವೇ ಪ್ರಕಾರ ಕೊಡಲ್ಪಟ್ಟ ಪಟ್ಟೇಗಳು ರದ್ದು ಮಾಡಲ್ಪಟ್ಟಿರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಡುತ್ತೆ.

ನಂ. 2. ತಾರೀಖು 23ನೇ ನವಂಬರ್ 1887ನೇ ಇಸವಿ.

ಇನಾಂದಾರರಿಗೆ ಯಿದರಿಂದ ತಿಳಿಸುವದೇನಂದರೆ, ಚಾಮರಾಜನಗರ ಮತ್ತು ಮೊಳಕಾಲ್ ಮುರು ತಾಲ್ಲೂಕುಗಳಲ್ಲಿ ಯಿರತಕ್ಕ ಜಿಲ್ಲರೇ ಇನಾಂಗಳ ಬಾಬತು 144 ಫೈನಲ್‌ಟೈಟಲ್‌ಡೀಡ್ಡು ಯಾನೆ ಖಾಯಂ ಪಟ್ಟೇಗಳು ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರವರಿಗೆ ಬಟವಾಡೇ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕುಗಳ ಅಮಲ್‌ದಾರ್ರುಗಳಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಅವುಗಳನ್ನು ತೆಗದುಕೊಳ್ಳುವ ಬಗ್ಗೆ ಸದರೀ ಯಿನಾಂದಾರರು ಐಜ್ಞ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕುಗಳ ಅಮಲ್‌ದಾರ್ರುಗಳು ಅಂಥಾ ನೋಟೀಸುಗಳನ್ನು ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.